



ಪೋಷಕರೇ ನಿಮ್ಮ ಮಕ್ಕಳ ಮಾನಸಿಕ ಬೆಳವಣಿಗೆಯಲ್ಲಿ ಅಸಹಜತೆ ಕಂಡು ಬರುತ್ತಿದೆಯೇ? ನಿಮ್ಮ ಸಮಸ್ಯೆಗಳಿಗೆ ಆತಂಕಗಳಿಗೆ ಮನೋವಿಜ್ಞಾನಿ **ಡಾ.ಅ.ಶ್ರೀಧರ** ಅವರು ಉತ್ತರಿಸುತ್ತಾರೆ.

▶▶ ನನ್ನ ಮಗ ಈಗ ದ್ವಿತೀಯ ಪಿಯು ವಿಜ್ಞಾನ ಪರೀಕ್ಷೆಯನ್ನು ಮತ್ತೊಮ್ಮೆ ಬರೆಯುತ್ತಿದ್ದಾನೆ. 2012ರ ಏಪ್ರಿಲ್‌ನ ಪರೀಕ್ಷೆಯಲ್ಲಿ 4 ವಿಷಯಗಳಲ್ಲಿ ಮಾತ್ರ ಉತ್ತೀರ್ಣನಾಗಿದ್ದಾನೆ. ಅವನಿಗೀಗಾಲೇ ಇಪ್ಪತ್ತು ವರ್ಷ. ಅವನ ವಯಸ್ಸಿನವರೆಲ್ಲರೂ ಪದವಿ ಶಿಕ್ಷಣವನ್ನು ಮುಗಿಸುವುದರಲ್ಲಿದ್ದಾರೆ. ನಮ್ಮ ಹುಡುಗ ಆರಂಭದಿಂದಲೂ ಯಾವ ಪರೀಕ್ಷೆಯಲ್ಲಿಯೂ ಒಂದೇ ಸಲ ತೇರ್ಗಡೆಯಾಗಿಲ್ಲ. ಅವನಿಗೆ ಕಲಿಕೆಯ ಸಮಸ್ಯೆ ಇದೆ ಎನ್ನುವುದು ಇತ್ತೀಚೆಗಷ್ಟೇ ತಿಳಿದು ಬಂತು. (ಹಾಗೆಂದರೆ ಏನು ಅನ್ನುವುದೇ ತಿಳಿದಿಲ್ಲ) ಶಿಶುವಿಹಾರದಿಂದಲೂ ಅವನಿಗೆ ಆಂಗ್ಲ ಮಾಧ್ಯಮದ ಶಾಲೆಯಲ್ಲಿ ಶಿಕ್ಷಣ ಕೊಡಿಸಿದ್ದೇವೆ. ಜತೆಗೆ ಮನೆಪಾಠಕ್ಕೂ ವ್ಯವಸ್ಥೆ ಮಾಡುತ್ತಾ ಬಂದಿದ್ದೇವೆ. ಇದೀಗ ಅವನ ಭವಿಷ್ಯದ ಬಗ್ಗೆ ಆತಂಕ ಶುರುವಾಗಿದೆ. ಓದು ಬರಹದಲ್ಲಿ ಹಿಂದುಳಿದಿರುವುದರಿಂದ ಅವನಲ್ಲಿ ಆತ್ಮವಿಶ್ವಾಸ ಕುಂದಿದೆ. ತುಂಬಾ ಬೇಸರದಿಂದ ಸಮಯ ಕಳೆಯುತ್ತಾನೆ. ಅವನ ಮನಸ್ಸಿಗೆ ಹಿಡಿಸುವಂತಹ ವಿಷಯ ಯಾವುದು ಎನ್ನುವುದೇ ತಿಳಿಯುತ್ತಿಲ್ಲ. ನಮ್ಮ ಪ್ರಕಾರ ಅವನೇನು ಹುಂಬನಲ್ಲ ಎನಿಸುತ್ತದೆ. ಏಕೆಂದರೆ ಕುಟುಂಬದ ವ್ಯಾಪಾರದ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದಾನೆ. ಹಣಕಾಸು ವಿಷಯದ ಬಗ್ಗೆಯೂ ಜಾಗೃತನಾಗಿರುತ್ತಾನೆ. ಮನೆಯವರಿಗೆ ಅವನೊಂದು ಪದವಿ ಪಡೆದರೆ ಬೇರೊಂದು ವ್ಯಾಪಾರದತ್ತ ಮನಸ್ಸು ಮಾಡಬಹುದೆನ್ನುವ ಅಭಿಲಾಷೆ. ಕಾಲೇಜು ಶಿಕ್ಷಣ ಇಲ್ಲದಿದ್ದರೆ ವಹಿವಾಟು, ವ್ಯಾಪಾರ ಮಾಡಲಾಗದು ಎನ್ನುತ್ತಾರವರು. ನಮ್ಮದು ಕೂಡುಕುಟುಂಬ. ತಲೆಗೊಂದು ಮಾತಾಡುವ ಹಿರಿಯರೇ ಹೆಚ್ಚು. ಅವನು ಸ್ವಂತ ಸಾಮರ್ಥ್ಯದಿಂದಲೇ ಮುಂದುವರೆಯಬೇಕೆನ್ನುವ ಮಾತು ದಿನಕ್ಕೆ ನೂರಾರು ಸಲ ಅವರಿಂದ ಬರುತ್ತಿರುತ್ತದೆ. ಅವನೊಬ್ಬ ಸೋಮಾರಿ ಕಲಿಯುವುದಕ್ಕೆ ಮನಸ್ಸಿಲ್ಲ, ಮನೆಯಲ್ಲಿರುವ ಮಕ್ಕಳು ಕಲಿತಿಲ್ಲವಾ? ಎನ್ನುವ ಮಾತುಗಳು ಕೇಳಿಬರದ ದಿನವೇ ಇಲ್ಲ. ಬೆಳೆದು ನಿಂತಿರುವ ನನ್ನ ಮಗನಿಗೆ ಯಾವ ರೀತಿಯ ಸಲಹೆ ಕೊಡಬೇಕೆನ್ನುವುದೇ ತಿಳಿಯದಂತಾಗಿದೆ. ದಯಮಾಡಿ ಸಲಹೆ ನೀಡಿ.

– ಪ್ರಶಾಂತಿ ನಿಂಗಪ್ಪ, ನೆಲಮಂಗಲ

ಪ್ರತಿ ತರಗತಿಯಲ್ಲೂ ಪದೇಪದೇ ಅದೇ ಪರೀಕ್ಷೆ ಬರೆಯುತ್ತಿರುವ ನಿಮ್ಮ ಮಗನಲ್ಲಿ ಓದು, ಬರಹಕ್ಕೆ ಸಂಬಂಧಿಸಿದಂತಹ ಸಮಸ್ಯೆಗಳು ಇರುವ ಸಾಧ್ಯತೆಗಳಿರಬಹುದು. ಕಲಿಕೆಯ ದೋಷವೆನ್ನುವ ಸಮಸ್ಯೆ ಕಲಿಯುವ ಸಾಮರ್ಥ್ಯಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಅಂದರೆ, ಓದು, ಬರಹಗಳನ್ನು ಕಲಿಯುವಂತಹ ಸಾಮರ್ಥ್ಯ ಎಲ್ಲರಲ್ಲಿಯೂ ಇದ್ದೇ ಇರುತ್ತದೆ. ಸಣ್ಣ ವಯಸ್ಸಿನಲ್ಲಿಯೇ ವ್ಯಕ್ತವಾಗುವ ಈ ಗುಣವು ಶಾಲೆಯ ಕಲಿಕೆಗೆ ಬಹಳ ಅಗತ್ಯವಾದದು. ಉದಾಹರಣೆಗೆ ಅಕ್ಷರಗಳನ್ನು ಉಚ್ಚಾರಣೆ ಮಾಡುವುದು, ಬರೆಯುವುದು, ಅಂಕಿಗಳನ್ನು ಹೇಳಿಕೊಟ್ಟಂತೆ ಗುರುತಿಸುವಂತಹ ಗುಣಗಳು ಪೂರ್ವ ಪ್ರಾಥಮಿಕ ಶಾಲೆಯ ಮಟ್ಟದಲ್ಲಿಯೇ ಕಾಣಿಸಿಕೊಳ್ಳುತ್ತದೆ. ಸಮಸ್ಯೆ ಇದ್ದಂತಹ ಮಕ್ಕಳಲ್ಲಿ ಓದು, ಬರಹ, ಅಂಕಿಗಳನ್ನು ಗುರುತಿಸುವುದು ಕಷ್ಟವಾಗಿರುತ್ತದೆ. ಹಲವು ಸಲ ಕಲಿಸಿದರೂ ತಪ್ಪುಗಳೇ ಹೆಚ್ಚಾಗಿರುತ್ತವೆ.ಇಂತಹ ಪ್ರಕರಣಗಳಲ್ಲಿ ಪೋಷಕರು, ಶಿಕ್ಷಕರು ಗಮನಿಸಬೇಕಾಗಿರುವುದೇನೆಂದರೆ, ಇವು ಬೇಜಾರು, ಸೋಮಾರಿತನಗಳಿಂದ ಕಾಣಿಸಿಕೊಳ್ಳುವಂತಹದ್ದಲ್ಲ. ಇಂತಹ ಸಮಸ್ಯೆಗಳಿರುವ ಕೆಲವು ಮಕ್ಕಳು ಹೇಳಿಕೊಟ್ಟಿದ್ದನ್ನು ತಕ್ಷಣದಲ್ಲಿ ಹೇಳಿಬಿಡುತ್ತಾರೆ, ಆದರೆ, ಬರೆಯಲಾರರು. ಅಥವಾ ಸ್ವಲ್ಪ ಸಮಯದ ನಂತರ ಹೇಳಿದ್ದನ್ನು ಮರೆಯುವುದುಂಟು. ಇನ್ನು ಕೆಲವು ಮಕ್ಕಳಲ್ಲಿ ವರ್ಣಮಾಲೆಯ ಕೆಲವು ಅಕ್ಷರಗಳನ್ನು ಗುರುತಿಸುವುದು ಕಷ್ಟ. ತಮಗೆ ತೋಚಿದ ರೀತಿಯಲ್ಲಿ ಹೇಳುತ್ತಾರೆ ಅಥವಾ ಬರೆಯುತ್ತಾರೆ. ಹೀಗಾಗಿ ಮಕ್ಕಳಲ್ಲಿ ಕಲಿಕೆ ದೋಷಗಳು ಇರಬಲ್ಲವು. ಹಾಗೆಂದ ಮಾತ್ರಕ್ಕೆ ಅಂತಹ ಮಕ್ಕಳಲ್ಲಿ ಬುದ್ಧಿ ಸಾಮರ್ಥ್ಯ ಇಲ್ಲವೆಂದು ಹೇಳಲಾಗದು. ಕಲಿಕೆಯ ಸಮಸ್ಯೆಗಳು ಕೇವಲ ಓದು ಬರಹಕ್ಕೆ ಸೀಮಿತವೆನ್ನಬಹುದು. ಅದೂ ಕೂಡ ಅಕ್ಷರ, ಅಂಕಿಗಳನ್ನು ಗುರುತಿಸುವುದಕ್ಕೆ ಮಾತ್ರವೇ ಆಗಿರಬಹುದು. ಇಂತಹ ಮಕ್ಕಳಲ್ಲಿ ಬೇರೆ ರೀತಿಯ ಸಾಮರ್ಥ್ಯಗಳು ಇದ್ದೇ ಇರುವುದು. ಇವು ಕಸುಬು, ಕೌಶಲ್ಯಗಳತ್ತವೇ ಹೆಚ್ಚಾಗಿರಬಲ್ಲದು ಸಂಗೀತ, ಕಲೆ, ನೃತ್ಯ, ಅಭಿನಯ, ಮಾತುಗಾರಿಕೆ, ಹೀಗೆ ನೂರಾರು ಕ್ಷೇತ್ರಗಳಲ್ಲಿ ವಿಶೇಷ ಎನ್ನುವಂತಹ ಗುಣಗಳು ಅವರಲ್ಲಿರಬಲ್ಲದು. ಬಹುಶಃ ನಿಮ್ಮ ಹುಡುಗನಲ್ಲಿಯೂ ಅಂತಹ ಗುಣವಿರುವ ಸಾಧ್ಯತೆಗಳಿವೆ. ಈಗಲಾದರೂ ಅವುಗಳತ್ತ ಗಮನ ಹರಿಸುವುದು ಮುಖ್ಯ. ಅವನಿಗೆ ಇಷ್ಟ ಇರುವಂತಹ ಕಸುಬು, ಕೌಶಲ್ಯಗಳನ್ನು ಗುರುತಿಸಿ. ಅವುಗಳಿಗೆ ಸಂಬಂಧಿಸಿದ ತರಬೇತಿ ಕೊಡಿಸಿ. ಕಟುಂಬದ ವ್ಯಾಪಾರ, ವ್ಯವಹಾರದತ್ತ ಅವನ ಮನಸ್ಸು ಇದೆ ಎಂದು ನಿಮಗೆ ಅರಿವಾಗಿದೆ. ಅದನ್ನೇ ಪ್ರೋತ್ಸಾಹಿಸುವುದು ಒಳ್ಳೆಯದು. ಹಿರಿಯರ ಮನಸ್ಸನ್ನು ಓಲೈಸುವುದರತ್ತ ಪ್ರಯತ್ನ ಮಾಡಿ. ನಿಮ್ಮ ಹುಡುಗನೇನು ಸೋಮಾರಿಯಲ್ಲ. ಅವನಿಗೆ ಕಲಿಯುವ ಸಾಮರ್ಥ್ಯವಿದೆ, ಆದರದು ಶಾಲಾ, ಕಾಲೇಜಿನ ಪುಸ್ತಕಗಳನ್ನು ಓದಿಗಳಿಸುವಂತಹ ಸಾಮರ್ಥ್ಯವಲ್ಲ ಎನ್ನುವುದನ್ನು ಸರಿಯಾಗಿ ವಿವರಿಸಿ. ನಿಮ್ಮ ಮಗನಿಗೆ ಆತ್ಮವಿಶ್ವಾಸ ಮೂಡಿಸುವುದರತ್ತ ಗಮನಕೊಡಿ. ವಯಸ್ಸಿಗೆ ತಕ್ಕಂತೆ ಅವನಿಲ್ಲದಿರುವುದಕ್ಕೆ ಅವನ ಬಗ್ಗೆ ಮನೆಮಂದಿಯಲ್ಲಿ ಹುಟ್ಟಿಕೊಂಡಿರುವಂತಹ ತಪ್ಪು ಅಭಿಪ್ರಾಯವೇ ಮುಖ್ಯ ಕಾರಣವಾಗಿದೆ ಎನ್ನುವುದನ್ನು ಮರೆಯದಿರಿ.

▶▶ ನನ್ನ ಮಗಳಿಗೆ 11 ವರ್ಷ. ನಾನು, ನನ್ನ ಹೆಂಡತಿ ಸೇರಿ ಸಣ್ಣ ಸಂಚಾರಿ ಉಪಾಹಾರ ಗೃಹ ನಡೆಸುತ್ತಿದ್ದೇವೆ. ನಮ್ಮ ಮಗಳು ಮುಂದಿನ ವರ್ಷದಿಂದ ಆಂಗ್ಲ ಮಾಧ್ಯಮದಲ್ಲಿ ಓದಬೇಕು ಎನ್ನುವುದನ್ನು ಸಹಪಾಠಿಗಳಿಂದ ತಿಳಿದುಕೊಂಡಿದ್ದಾಳೆ. ಅದೇಕೋ ಏನೋ ಈ ವಿಷಯದ ಬಗ್ಗೆ ಬಹಳ ಆತಂಕದಿಂದಲೇ ಮಾತಾಡುತ್ತಾಳೆ. ಮುಂದಿನ ವರ್ಷದಿಂದ ಶಾಲೆಗೆ ಹೋಗುವುದಿಲ್ಲ ಎನ್ನುತ್ತಾಳೆ. ಮನೆಯಲ್ಲಿ ಸಹಾಯ ಮಾಡಿಕೊಂಡು ಇರುವುದಾಗಿ ಹೇಳುತ್ತಾಳೆ. ಓದು ಬರಹದಲ್ಲಿ ಇದುವರೆಗೂ ಇದ್ದಂತಹ ವಿಶ್ವಾಸ, ಹುಮ್ಮಸ್ಸು ಈಗ ಕಡಿಮೆಯಾಗಿದೆ. ಸದ್ಯಕ್ಕೆ ಓದು, ಮುಂದಿನ ವರ್ಷ ನೋಡೋಣ ಎಂದು ಎಷ್ಟೇ ಹೇಳಿದರೂ ಏನಾದರೂ ನೆಪ ಹೇಳಿ ಶಾಲೆಗೆ ಹೋಗುವುದನ್ನು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಾಳೆ. ನಾನು ಹೆಚ್ಚು ಓದಿಲ್ಲ. ನನ್ನ ಹೆಂಡತಿ ಏಳನೇ ತರಗತಿಯವರೆಗಷ್ಟೇ ಓದಿರುವುದು. ಆದರೆ, ನಮ್ಮ ಮಗಳು ಒದ್ದಾಡುತ್ತಿರುವುದನ್ನು ನೋಡಿದರೆ ಅವಳಿಗೆ ಇಷ್ಟಬಂದಂತೆ ಮಾಡಲಿ ಎನಿಸುತ್ತದೆ. ಈಗೇನು ಮಾಡುವುದು ಎನ್ನುವುದು ತಿಳಿಯುತ್ತಿಲ್ಲ. ದಯಮಾಡಿ ಸಲಹೆ ನೀಡಿ.

–ರಮಣ, ರಾಮನಗರ

ಮೊದಲಿಗೆ ನಿಮ್ಮ ಮಗಳ ಮನಸ್ಸಿನಲ್ಲಿ ಸೇರಿಕೊಂಡಿರುವ ಹೊಸ ಕಲಿಕೆಯ ಆತಂಕವನ್ನು ಕಡಿಮೆಮಾಡುವತ್ತ ಗಮನ ಹರಿಸಿ. ಅವಳ ಶಾಲಾ ವಾತಾವರಣದಲ್ಲಿ ಅರ್ಥವಾಗದಂತಹ ಹೊಸತನ ಬರುವುದಿಲ್ಲ ಎನ್ನುವುದನ್ನು ವಿವರಿಸಿ. ಹಾಗೆಯೇ, ಒಂದೆರೆಡು ಸಲ ಅವಳೊಂದಿಗೆ ಶಾಲೆಗೆ ಭೇಟಿ ನೀಡಿ, ಶಿಕ್ಷಕರೊಂದಿಗೆ ಈ ವಿಷಯವನ್ನು ಪ್ರಸ್ತಾಪಿಸಿ. ಈಗ ಕಲಿಯುತ್ತಿರುವ ವಿಷಯದಲ್ಲಿ ತೊಂದರೆಗಳು ಏನಾದರೂ ಇದೆಯೇ ಎನ್ನುವುದನ್ನು ತಿಳಿದುಕೊಳ್ಳಿ. ಎಷ್ಟೋ ಸಲ ಹೊಸ ವಿಷಯಗಳು, ಹೊಸ ತರಗತಿ ಅಥವಾ ಗೆಳೆಯರು ಶಾಲೆಯ ಆರಂಭದ ದಿನಗಳಲ್ಲಿ ಇಂತಹದೊಂದು ಆತಂಕವನ್ನು ಸೃಷ್ಟಿಸುವ ಸಾಧ್ಯತೆಗಳಿವೆ. ಆದ್ದರಿಂದ ಅವಳ ಜತೆ ಶಾಲೆಯಲ್ಲಿ ಕೆಲಸಮಯ ಕಳೆದು ಶಿಕ್ಷಕರು ಮತ್ತು ಇತರ ಮಕ್ಕಳು ಈ ವಿಷಯದ ಬಗ್ಗೆ ಎಂತಹ ಅಭಿಪ್ರಾಯ ಇರಿಸಿಕೊಂಡಿದ್ದಾರೆ ಎನ್ನುವುದನ್ನು ಅರ್ಥಮಾಡಿಕೊಳ್ಳಿ. ನಂತರ ನಿಮ್ಮ ಮಗಳಿಗೆ ಈ ವಿಷಯದ ಬಗ್ಗೆ ತಿಳಿವಳಿಕೆ ನೀಡುವುದು ಸುಲಭ. ಇದಲ್ಲದೆ, ಅವಳ ಮನಸ್ಸನ್ನು ಶಾಲೆಯಲ್ಲಿ ನಡೆಯುವ ಇತರ ಚಟುವಟಿಕೆಗಳತ್ತ ಗಮನ ಹರಿಯುವುಂತೆ ಮಾಡಿ. ಈಗಾಗಲೇ ಅವಳು ಕಲಿತಿರುವ ರೀತಿಯಲ್ಲಿಯೇ ಕಲಿಯುವ ಕ್ರಮ ಮುಂದುವರೆಯುತ್ತದೆ ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಿ. ನೀವೂ ಸಹ ಮುಂದಿನ ವರ್ಷದ ಪರೀಕ್ಷೆ, ಭವಿಷ್ಯದ ಬಗ್ಗೆ ಭಯ ಹುಟ್ಟಿಸುವುದು ಬೇಡ. ಓದಲು ಒತ್ತಾಯಿಸಬೇಡಿ. ಅವಳು ಶಾಲೆಯಲ್ಲಿ ಏನು ಕಲಿತಿದ್ದಾಳೆ ಎನ್ನುವುದನ್ನು ನೇರವಾಗಿ ತಿಳಿಯುವ ಬದಲು ಅವಳು ಕಲಿತಿದ್ದನ್ನು ನಿಮಗೂ ಕಲಿಸುವಂತೆ ಹೇಳಿ. ಇದನ್ನು ನಿತ್ಯವೂ ಮಾಡಿಬೇಡಿ. ಆಗೊಮ್ಮೆ ಈಗೊಮ್ಮೆ ಮಾಡಿ. ಹಾಗೆಯೇ, ನಿಮ್ಮ ವ್ಯಾಪಾರಕ್ಕೆ ಸಂಬಂಧಿಸಿದ ಸಣ್ಣಪುಟ್ಟ ಲೆಕ್ಕವನ್ನು ಅವಳಿಂದ ಮಾಡಿಸಿ. ಮುಂದಿನ ವರ್ಷ ಅವಳಿಷ್ಟ ಬಂದಂತೆ ಮಾಡಲಿ ಎನ್ನುವ ರೀತಿಯಲ್ಲಿಯೇ ನಿಮ್ಮ ವರ್ತನೆಗಳಿರಲಿ.

**ನಿಮ್ಮ ಪ್ರಶ್ನೆಗಳನ್ನು ಕಳುಹಿಸಬೇಕಾದ ವಿಳಾಸ:** ಸಂಪಾದಕರು, 'ಸುಧಾ', 'ನನ್ನ ಮಗು ಹೀಗೇಕೆ?' ವಿಭಾಗ, 75, ಎಂಜಿ. ರಸ್ತೆ, ಬೆಂಗಳೂರು-560001, ಮೊಬೈಲ್ 9880937122